Effecting Repairs to Jambayyanakere.

Q.—264. Sri M. M. PATIL (Hadagali).—

Will the Government be pleased to state :—

(*a*) whether any representation has been made to effect repairs to Jambayyanakere near Thimmalapur village in the H bli of Belakanahatti, Hospet Taluk ;

(*b*) if so, the action taken in that behalf ?

A.—Sri H. K. VEERANNA GOWDH (Minister for Public Works).—

(*a*) Yes.

(*b*) An estimate for Rs. 2,950 has been sanctioned. The work will be taken up for execution and completed as soon as possible.

ಶ್ರೀ ಎಂ. ಎಂ. ಪಾಟೀಲ್.—ಈ ಕೆಲಸ ಯಾವಾಗ ತೆಗೆದುಕೊಳ್ಳೋಣವಾಗುತ್ತದೆ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಕೆರೆಯಲ್ಲಿ ಇನ್ನೂ ಎಂಟು-ಹತ್ತು ಅಡಿ ನೀರು ಇದೆ, ಅಲ್ಲಿ ನೀರು ಕಡಮೆ ಯಾದ ಕೂಡಲೇ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಂ. ಪಾಟೀಲ್.—ಆ ಕೆರೆಯ ಕೆಳಗೆ ಅಚ್ಚುಕಟ್ಟು ಎಷ್ಟು ಇದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮೊದಲೇ ತಾವು ಕೇಳಿದ್ದರೆ ತರಿಸುತ್ತಿದ್ದೆ.

Police Inspectors and Sub-Inspectors in Bangalore District whose Service is more than two years in each place.

Q.—297. Sri S. KARIAPPA (Virupakshipura).—

Will the Government be pleased to state :—

the number of Police Inspectors and Sub-Inspectors who are in the same place for more than two years in various taluks in Bangalore District ?

A.—Sri C. M. POONACHA (Minister for Home Affairs and Industries).—

(1) *Police Inspectors* :

(i) Sri K. Venkataramiah, P.I., Channapatna, is in the Taluk since 14th May 1955 (He is under orders of transfer to Pavagada Taluk).

(ii) Sri K. L. Krishnaswamy, P.I., Nelamangala, is in the Taluk since 17th February 1955.

(2) *Sub-Inspectors.*

(i) Sri T. N. Gopalakrishna Iyengar (Ramanagaram Prosecution, dated 3rd November 1954).

(ii) Sri N. Subba Rao (Special Branch, District Police Office, Bangalore District, dated 7th February 1955).

(iii) Sri T. Mudigiriappa, Harohalli Range, dated 4th February 1955.

(iv) Sri D. Krishna Murthy (Doddabelavangala, 22nd July 1953, since transferred to Kodihalli.)

ಶ್ರೀ ಎಸ್. ಕರಿಯಪ್ಪ.—ಪೋಲೀಸ್ ಇನ್‌ಸ್ಪೆಕ್ಟರು ಮತ್ತು ಸಬ್-ಇನ್‌ಸ್ಪೆಕ್ಟರುಗಳನ್ನು ಒಂದೇ ಸ್ಥಳದಲ್ಲಿ ಇಷ್ಟುಕಾಲಕ್ಕಿಂತಲೂ ಜಾಸ್ತಿ ಇಡಕೂಡದು ಎಂದು ನಿಯಮವಿದೆಯೇ ?

*ಶ್ರೀ ಸಿ. ಎಂ. ಪೂಣಚ್ಚ.—ಮೂರು ವರ್ಷಗಳಿಗಿಂತ ಹೆಚ್ಚಾಗಿ ಒಬ್ಬ ಪೋಲೀಸ್ ಆಫೀಸರನ್ನು ಒಂದೇ ಸ್ಥಳದಲ್ಲಿ ಇಡಬಾರದು ಎಂದು ನಿಯಮವಿದೆ.

ಶ್ರೀ ಎಸ್. ಕರಿಯಪ್ಪ.—ಈಗ ಆ ನಿಯಮವನ್ನು ಉಲ್ಲಂಘನೆ ಮಾಡಲಿಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಅದು ಈ ಪ್ರಶ್ನೆ ಮೇಲೆ ಉದ್ಭವಿಸುವುದಿಲ್ಲ. ತಮ್ಮ ಪ್ರಶ್ನೆ ಇದರಲ್ಲಿ ಇಲ್ಲ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಈಗ ಕೊಟ್ಟಿರುವ ಉತ್ತರದಲ್ಲಿ ಒಂದೇ ಸ್ಥಳದಲ್ಲಿ ಹೆಚ್ಚಿಗೆ ಮೂರು ವರ್ಷಕ್ಕಿಂತ ಹೆಚ್ಚು ಇದ್ದವರು ಯಾರಾದರೂ ಇದ್ದಾರೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ತಮ್ಮ ಮುಂದೆ ಪಟ್ಟಿ ಇದೆ.

ಶ್ರೀ ಎಸ್. ಆರ್. ರಾಮಯ್ಯ.—ಒಬ್ಬರು ಸಬ್-ಇನ್‌ಸ್ಪೆಕ್ಟರನ್ನು ಒಂದೇ ತಾಲ್ಲೂಕಿನಲ್ಲಿ ಒಂದು ರೇಂಜಿನಿಂದ ಇನ್ನೊಂದು ರೇಂಜಿಗೆ ಟ್ರಾನ್ಸ್‌ಫರ್ ಮಾಡಿದರೆ ಅದನ್ನು ಟ್ರಾನ್ಸ್‌ಫರ್‌ಮಾಡಿದ್ದು ಎಂದು ಪರಿಗಣಿಸುವುದಕ್ಕಾಗುತ್ತದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಅದು ಟ್ರಾನ್ಸ್‌ಫರ್ ಆಗುವುದಿಲ್ಲ.

ಶ್ರೀ ಎಸ್. ಕರಿಯಪ್ಪ.—ಬೇರೆ ಇಲಾಖೆಗಳಲ್ಲಿ ಮೂರು ವರ್ಷಗಳಿಗಿಂತಲೂ ಜಾಸ್ತಿ ಇರಕೂಡದು ಎಂದು ಇದೆ. ಆದರೆ ಪೋಲೀಸ್ ಇಲಾಖೆಯಲ್ಲಿ ಎರಡು ವರ್ಷಗಳಿಗಿಂತ ಜಾಸ್ತಿ ಒಂದೇಕಡೆ ಇರಕೂಡದು ಎಂದು ನಿಯಮವಿದೆಯಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಇಲ್ಲ. ಆ ರೀತಿ ಇದ್ದ ಹಾಗೆ ತಿಳಿದು ಬರಲಿಲ್ಲ.

ಶ್ರೀ ಎಸ್. ಕರಿಯಪ್ಪ.—ಈ ನಿಯಮವನ್ನು ಉಲ್ಲಂಘಿಸಿಲ್ಲ ಎಂದು ತಾವು ಅಪ್ಪಣೆಕೊಡಿಸಿದಿರಿ. ನಾಲ್ಕನೇ ನಂಬರಿನಲ್ಲಿ ಸೂಚಿಸಿದ ಸಬ್-ಇನ್‌ಸ್ಪೆಕ್ಟರುಗಳು ನಿಯಮ ಉಲ್ಲಂಘಿಸಿಲ್ಲವೇ ?